**OS.64-2022**
**PW-1**

**ದಿನಾಂಕಃ 31.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ವಿ.ಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ಅಕ್ಕೂರು ಗ್ರಾಮದ ಸರ್ವೆ ನಂ 25/1 ರ ಪಹಣಿ ಪತ್ರಿಕೆಯ ಗಣಕೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಎರಡು ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು, ಮಹದೇವನಾಯಕ , ರಾಚನಾಯಕ, ನಿಂಗಮ್ಮ, ಮಾದಯ್ಯ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಅಕ್ಕೂರು ಗ್ರಾಮದ ಸರ್ವೆ ನಂ 25/1 ರ ಹದ್ದು ಬಸ್ತು ಸರ್ವೆ ಸ್ಕೆಚ್ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಎಮ್.ಆರ್ ನಂ. 64/2000-01 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಅಕ್ಕೂರು ಗ್ರಾಮದ ಸರ್ವೆ ನಂ 25/1 ರ ಅರ್.ಆರ್-6 ಮತ್ತು ಆರ್.ಆರ್-5 ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ